# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 4 (65) |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಎಂ. ಎಲ್. ಅನಿಲ್ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 04.03.2025 |
| ಉತ್ತರಿಸುವ ಸಚಿವರು | : | ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಕೋಲಾರ ಜಿಲ್ಲೆಯ ಬಂಗಾರಪೇಟೆ ಮತ್ತು ಕೆ.ಜಿ.ಎಫ್ ತಾಲ್ಲೂಕುಗಳಲ್ಲಿ ಬಿ.ಜಿ.ಎಂ.ಎಲ್ ಮತ್ತು ಬಿ.ಇ.ಎಂ.ಎಲ್ ವ್ಯಾಪ್ತಿಗೆ ಒಳಪಡುವ ಜಮೀನಿನ ವಿಸ್ತೀರ್ಣವೆಷ್ಟು; (ಸರ್ವೆ ನಂಬರ್‌ವಾರು, ಗ್ರಾಮವಾರು ಮತ್ತು ವಿಸ್ತೀರ್ಣವಾರು ಸಂಪೂರ್ಣವಾದ ಮಾಹಿತಿ ನೀಡುವುದು) | BGML ಹಾಗೂ BEML ಸಂಸ್ಥೆಗಳು ಕೇಂದ್ರ ಸರ್ಕಾರದ ವ್ಯಾಪ್ತಿಯಲ್ಲಿ ಬರುತ್ತವೆ.<br>ಇಲಾಖೆಯಲ್ಲಿ ಲಭ್ಯವಿರುವ ಮಾಹಿತಿಯಂತೆ ಕೋಲಾರ ಜಿಲ್ಲೆಯ ಬಂಗಾರಪೇಟೆ ಮತ್ತು ಕೆ.ಜಿ.ಎಫ್ ತಾಲ್ಲೂಕುಗಳಲ್ಲಿ BGML ವ್ಯಾಪ್ತಿಯಲ್ಲಿ 12335.51 ಎಕರೆ ಹಾಗೂ BEML ವ್ಯಾಪ್ತಿಯಲ್ಲಿ 1846 ಎಕರೆ ಜಮೀನಿರುತ್ತದೆ. |
| (ಆ) | ಬಿ.ಜಿ.ಎಂ.ಎಲ್ ಮತ್ತು ಬಿ.ಇ.ಎಂ.ಎಲ್ ಜಮೀನು ಪೈಕಿ ಎಷ್ಟು ವಿಸ್ತೀರ್ಣ ಜಮೀನನ್ನು ಸರ್ಕಾರಕ್ಕೆ ಮರು ನಿಹಿತಗೊಳಿಸಲಾಗಿದೆ; (ಸರ್ವೆ ನಂಬರ್‌ವಾರು, ಗ್ರಾಮವಾರು ಮತ್ತು ವಿಸ್ತೀರ್ಣವಾರು ಸಂಪೂರ್ಣವಾದ ಮಾಹಿತಿ ನೀಡುವುದು) | BGML ಗೆ ಸೇರಿದ ಜಮೀನಿನ ಸರ್ವೆ ನಂ., ಗ್ರಾಮವಾರು ಮತ್ತು ವಿಸ್ತೀರ್ಣವನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ.<br>BEML ಗೆ ನೀಡಿದ 1846 ಎಕರೆ ಜಮೀನಿನಲ್ಲಿ ಸಂಸ್ಥೆಯು ತನ್ನ ಉದ್ದೇಶಿತ ಚಟುವಟಿಕೆಗಳಿಗಾಗಿ ಅವಶ್ಯಕವಾದ ಜಮೀನನ್ನು ಉಪಯೋಗಿಸಿಕೊಂಡು, ಸಂಸ್ಥೆಗೆ ಅವಶ್ಯವಿಲ್ಲದ 967-20 ಎಕರೆ ಜಮೀನನ್ನು ಹೆಚ್ಚುವರಿ ಜಮೀನೆಂದು ನಿರ್ಧರಿಸಿ ಸರ್ಕಾರವು ಹಿಂತೆಗೆದುಕೊಂಡಿದೆ. |
| (ಇ) | ಸರ್ಕಾರಕ್ಕೆ ಮರು ನಿಹಿತಗೊಳಿಸಿಕೊಂಡ ಜಮೀನನ್ನು ಯಾವ ಯಾವ ಉದ್ದೇಶಗಳಿಗೆ ಉಪಯೋಗಿಸಲಾಗಿದೆ; ಉಳಿಕೆ ಎಷ್ಟಿದೆ; (ಸಂಪೂರ್ಣವಾದ ಮಾಹಿತಿ ನೀಡುವುದು) | |
| (ಈ) | ಈ ಪೈಕಿ ಕೆ.ಐ.ಎ.ಡಿ.ಬಿ ಪ್ರದೇಶಕ್ಕೆ ಎಷ್ಟು ವಿಸ್ತೀರ್ಣವನ್ನು ನೀಡಲಾಗಿರುತ್ತದೆ; | BEML ನಿಂದ ಹಿಂತೆಗೆದುಕೊಂಡ ಜಮೀನಿನ ಸರ್ವೆ ನಂ. ಹಾಗೂ ವಿವಿಧ ಉದ್ದೇಶಗಳಿಗಾಗಿ ಮಂಜೂರು ಮಾಡಿದ ಸರ್ಕಾರದ ಆದೇಶ ಸಂಖ್ಯೆ ಆರ್‌ಡಿ 22 ಎಲ್‌ಜಿಕೆ 2019, ದಿನಾಂಕ 26.12.2023 ಅನ್ನು **ಅನುಬಂಧ-2** ರಲ್ಲಿ ನೀಡಲಾಗಿದೆ. |
| (ಉ) | ಸದರಿ ಜಮೀನನ್ನು ಯಾವ ಯಾವ ಕೈಗಾರಿಕೆ/ ಕಂಪನಿಗಳಿಗೆ ನೀಡಲಾಗಿದೆ; ಪ್ರತಿ ಎಕರೆಗೆ ಎಷ್ಟು ಮೊತ್ತವನ್ನು ನಿಗದಿಗೊಳಿಸಲಾಗಿದೆ? (ಸಂಪೂರ್ಣವಾದ ಮಾಹಿತಿ ನೀಡುವುದು) | BGML ನಿಂದ ಯಾವುದೇ ಜಮೀನನ್ನು ಸರ್ಕಾರವು ಹಿಂತೆಗೆದುಕೊಂಡಿರುವುದಿಲ್ಲ.<br>ಸರ್ಕಾರದ ಆದೇಶ ಸಂಖ್ಯೆ ಆರ್‌ಡಿ 22 ಎಲ್‌ಜಿಕೆ 2019, ದಿನಾಂಕ 26.12.2023 ರಲ್ಲಿ BEML ನಿಂದ ಹಿಂತೆಗೆದುಕೊಂಡ ಜಮೀನಿನ ಪೈಕಿ 668-20 ಎಕರೆ ಜಮೀನನ್ನು ಕೆಐಎಡಿಬಿಗೆ ಮಂಜೂರು ಮಾಡಲಾಗಿದೆ.<br>ಕೆಐಎಡಿಬಿಯಿಂದ ಇಲ್ಲಿಯವರೆಗೆ ಯಾವುದೇ ಕಂಪನಿಗೆ ಹಂಚಿಕೆ ಮಾಡಿರುವುದಿಲ್ಲ.<br>ಹಂಚಿಕೆ ದರ ನಿಗಧಿ ಸಂಬಂಧ ಮಂಡಳಿ ಸಭೆಯಲ್ಲಿ ನಿರ್ಣಯಿಸಲಾಗುತ್ತದೆ. |

**ಸಂಖ್ಯೆ: ಸಿಐ 110 ಐಎಪಿ 2025**

**(ಎಂ.ಬಿ. ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು

ಅನುಬಂಧ-1

**Office of the Chief Security & Estate Officer**
BHARAT GOLD MINES LIMITED
(A Government of India Enterprise)

Registered Office: Suvarna Bhawan
Po: Oorgaum, Kolar Gold Fields
District: Kolar, Karnataka, India – 563120
Phone: 08153-295580
email id: eobgml@gmail.com

| Sl. No. | Town | Hobli | Village | Survey No. | As per Sale deed | As per RTC till date we have recived | Diffrence | Remarks |
|---|---|---|---|---|---|---|---|---|
| 1 | KGF | Bethamangala | Gollahalli | 197 | 64.07 | 64.07 | 0 | |
| 2 | KGF | Bethamangala | Isandra | 36 | 392.09 | | 392.09 | |
| 3 | KGF | Bethamangala | Kadiregowdanakote | 119 | 28.3 | 28.3 | 0 | |
| 4 | KGF | Bethamangala | Kadiregowdanakote | 120 | 319.14 | 319.14 | 0 | |
| 5 | KGF | Bethamangala | Redhihalli | 46 | 99.23 | 72.16 | 27.07 | |
| 6 | KGF | Robertsonpet | Gattakamadenahalli | 24 | 8.2 | | 8.2 | |
| 7 | KGF | Robertsonpet | Gattakamadenahalli | 25 | 284.1 | 279.36 | 4.74 | |
| 8 | KGF | Robertsonpet | Gattakamadenahalli | 26 | 58.18 | 58.18 | 0 | |
| 9 | Bangarpet | Robertsonpet | Doddurkarapanahalli | 6 | 74.03 | | 74.03 | |
| 10 | Bangarpet | Robertsonpet | Doddurkarapanahalli | 7 | 395.02 | 409.14 | -14.12 | |
| 11 | Bangarpet | Robertsonpet | Doddurkarapanahalli | 21 | 1.26 | 1.26 | 0 | |
| 12 | Bangarpet | Robertsonpet | Doddurkarapanahalli | 131 | 45.11 | 45.11 | 0 | |
| 13 | Bangarpet | Robertsonpet | Doddarahalli | 132 | 217.1 | 217.1 | 0 | |
| 14 | Bangarpet | Robertsonpet | Ex-Jodi Madamuthanahalli | | 5.01 | | 5.01 | |
| 15 | Bangarpet | Robertsonpet | Hunkunda | 45 | 170.25 | | 170.25 | |
| 16 | Bangarpet | Robertsonpet | Doddurkarapanahalli | 2 | 8.38 | | 8.38 | |
| 17 | Bangarpet | Robertsonpet | Doddurkarapanahalli | 12 | 2.24 | | 2.24 | |
| 18 | Bangarpet | Robertsonpet | Doddurkarapanahalli | 3 | 8.1 | | 8.1 | |
| 19 | Bangarpet | Robertsonpet | Doddurkarapanahalli | 14 | 10.12 | | 10.12 | |
| 20 | Bangarpet | Robertsonpet | Doddurkarapanahalli | 4 | 8 | | 8 | |
| 21 | Bangarpet | Robertsonpet | Doddurkarapanahalli | 13 | 11.12 | | 11.12 | |
| 22 | Bangarpet | Robertsonpet | Doddurkarapanahalli | 15-1 | 3.07 | | 3.07 | |
| 23 | Bangarpet | Robertsonpet | Doddurkarapanahalli | 2 | 1.33 | | 1.33 | |
| 24 | Bangarpet | Robertsonpet | Doddurkarapanahalli | 3 | 2.03 | | 2.03 | |
| 25 | Bangarpet | Robertsonpet | Doddurkarapanahalli | 4 | 2.08 | | 2.08 | |
| 26 | Bangarpet | Robertsonpet | Doddurkarapanahalli | 5 | 3.21 | | 3.21 | |
| 27 | Bangarpet | Robertsonpet | Doddurkarapanahalli | 16-2 | 0.18 | | 0.18 | |
| 28 | Bangarpet | Robertsonpet | Doddurkarapanahalli | 17-1A | 0.28 | | 0.28 | |
| 29 | Bangarpet | Robertsonpet | Doddurkarapanahalli | 1B | 0.28 | | 0.28 | |
| 30 | Bangarpet | Robertsonpet | Doddurkarapanahalli | 4 | 1.17 | | 1.17 | |
| 31 | KGF | Robertsonpet | Oorgaum | 149 | 2.33 | 2.33 | 0 | |
| 32 | KGF | Robertsonpet | Oorgaum | 150 | 6.31 | 6.31 | 0 | |
| 33 | KGF | Robertsonpet | Oorgaum | 151 | 7.32 | 7.32 | 0 | |
| 34 | KGF | Robertsonpet | Oorgaum | 148 | 0.1 | 0.1 | 0 | |
| 35 | KGF | Robertsonpet | Oorgaum | 147 | 0.03 | 0.03 | 0 | |
| 36 | KGF | Robertsonpet | Oorgaum | 188 | 29.16 | | 29.16 | |
| 37 | KGF | Robertsonpet | Oorgaum | 189 | 13.11 | 12.06 | 1.05 | |
| 38 | KGF | Robertsonpet | Oorgaum | 190 | 5.2 | | 5.2 | |
| 39 | KGF | Robertsonpet | Oorgaum | 252 | 2.09 | 2.05 | 0.04 | |
| 40 | KGF | Robertsonpet | Oorgaum | 251 | 3.12 | 2.33 | 0.79 | |
| 41 | KGF | Robertsonpet | Oorgaum | 250 | 1.05 | 1.04 | 0.01 | |
| 42 | KGF | Robertsonpet | Oorgaum | 191 | 9.36 | 6.24 | 3.12 | |
| 43 | KGF | Robertsonpet | Oorgaum | 192 | 2.33 | 2.1 | 0.23 | |
| 44 | KGF | Robertsonpet | Oorgaum | 193 | 2.32 | 2.29 | 0.03 | |
| 45 | KGF | Robertsonpet | Oorgaum | 194 | 6.17 | 5.04 | 1.13 | |
| 46 | KGF | Robertsonpet | Oorgaum | 195 | 3.27 | | 3.27 | |
| 47 | KGF | Robertsonpet | Oorgaum | 196 | 7.14 | 7.09 | 0.05 | |
| 48 | KGF | Robertsonpet | Oorgaum | 200 | 2.26 | | 2.26 | |
| 49 | KGF | Robertsonpet | Oorgaum | 201-1 | 1.14 | | 1.14 | |
| 50 | KGF | Robertsonpet | Oorgaum | 234 | 10.38 | 10.38 | 0 | |

| | | | | | | | |
|---|---|---|---|---|---|---|---|
| 51 | KGF | Robertsonpet | Oorgaum | 235 | 15.26 | 15.1 | 0.16 |
| 52 | KGF | Robertsonpet | Oorgaum | 236 | 20.05 | 19.3 | 0.75 |
| 53 | KGF | Robertsonpet | Oorgaum | 237 | 13.18 | 13.18 | 0 |
| 54 | KGF | Robertsonpet | Oorgaum | 249 | 1.28 | 1.19 | 0.09 |
| 55 | KGF | Robertsonpet | Swarnakuppa | 58 | 0.28 | | 0.28 |
| 56 | KGF | Bethamangala | Nachihalli | 15 | 26.16 | 26.16 | 0 |
| 57 | KGF | Bethamangala | Pottapalli | 51-1 | 3.36 | 3.36 | 0 |
| 58 | KGF | Bethamangala | Masika | 191 | 83.22 | 83.22 | 0 |
| 59 | KGF | Bethamangala | Masika | 44 | 1.37 | 1.37 | 0 |
| 60 | KGF | Bethamangala | Masika | 45 | 2.29 | | 2.29 |
| 61 | KGF | Bethamangala | Masika | 46 | 0.06 | 0.06 | 0 |
| 62 | KGF | Bethamangala | Masika | 47 | 0.01 | 0.01 | 0 |
| 63 | KGF | Bethamangala | Masika | 48 | 0.19 | | 0.19 |
| 64 | KGF | Bethamangala | Masika | 65 | 4.39 | 4.39 | 0 |
| 65 | KGF | Robertsonpet | Gangadoddi | 41 | 88.18 | 64.23 | 23.95 |
| 66 | KGF | Robertsonpet | Gonamakanahalli | 28 | 211.25 | 211.25 | 0 |
| 67 | KGF | Robertsonpet | Gonamakanahalli | 55 | 9.35 | | 9.35 |
| 68 | KGF | Robertsonpet | Thummalapalli | 2 | 164.37 | | 164.37 |
| 69 | KGF | Kyasamballi | Doddakallahalli | 88 | 140.14 | 206.09 | -65.95 |
| 70 | Bangarpet | Kamasandra | Bodagurki | 68 | 118.33 | | 118.33 |
| 71 | Bangarpet | Kamasandra | Bodagurki | 70 | 12.3 | | 12.3 |
| 72 | Bangarpet | Kamasandra | Kamasandra Road | Road | 8.1 | | 8.1 |
| 73 | Bangarpet | Kamasandra | Peddamaripalli | 12 | 266.16 | 498.3 | -232.14 |
| 74 | Bangarpet | Kamasandra | Chainnamaripalli | 14 | 234.2 | | 234.2 |
| 75 | Bangarpet | Kamasandra | Pichahalli | 20 | 171.22 | 131.38 | 39.84 |
| 76 | Bangarpet | Kamasandra | Dimbaladibbanahalli | 37 | 282.02 | 249.37 | 32.65 |
| 77 | Bangarpet | Kamasandra | Bovisonnapalli | 25 | 36.29 | | 36.29 |
| 78 | Bangarpet | Kamasandra | Bovisonnapalli | 26 | 656 | | 656 |
| 79 | Bangarpet | Kamasandra | Ukkarahalli | 60 | 19.25 | | 19.25 |
| 80 | Bangarpet | Kamasandra | Bovinahalli | 41 | 19.33 | 23.2 | -3.87 |
| 81 | KGF | Robertsonpet | Chinnakote | No No. | 6.24 | | 6.24 |
| 82 | Bangarpet | Kasaba | Kathihalli | 10-1 | 1.28 | | 1.28 |
| 83 | Bangarpet | Kasaba | Kathihalli | 10-2 | 1.22 | | 1.22 |
| 84 | Bangarpet | Kasaba | Kathihalli | 3 | 0.08 | | 0.08 |
| 85 | Bangarpet | Kasaba | Kathihalli | 9 | 0.1 | | 0.1 |
| 86 | Bangarpet | Kasaba | Kathihalli | 8 | 1.31 | | 1.31 |
| 87 | Bangarpet | Kasaba | Kathihalli | 7-1 | 5.41 | | 5.41 |
| 88 | Bangarpet | Kasaba | Dasarahosahalli | 50 | 1.03 | 1.03 | 0 |
| 89 | Bangarpet | Kasaba | Dasarahosahalli | 52 | 0.26 | | 0.26 |
| 90 | Bangarpet | Kasaba | Dasarahosahalli | 19-4 | 0.08 | | 0.08 |
| 91 | Bangarpet | Kasaba | Dasarahosahalli | 53 | 6.17 | | 6.17 |
| 92 | Bangarpet | Kasaba | Dasarahosahalli | 54 | 0.14 | 2.17 | -2.03 |
| 93 | Bangarpet | Kasaba | Dasarahosahalli | 55 | 0.14 | | 0.14 |
| 94 | Bangarpet | Kasaba | Dasarahosahalli | 56 | 3 | | 3 |
| 95 | Bangarpet | Kasaba | Dasarahosahalli | 57 | 0.23 | | 0.23 |
| 96 | Bangarpet | Kasaba | Dasarahosahalli | 60 | 0.18 | | 0.18 |
| 97 | Bangarpet | Kasaba | Dasarahosahalli | 61 | 0.35 | | 0.35 |
| 98 | Bangarpet | Kasaba | Dasarahosahalli | 62 | 5.2 | | 5.2 |
| 99 | Bangarpet | Kasaba | Dasarahosahalli | 63 | 5.02 | | 5.02 |
| 100 | Bangarpet | Kasaba | Dasarahosahalli | 65-2 | 1.18 | | 1.18 |
| 101 | Bangarpet | Kasaba | Dasarahosahalli | Road | 1.08 | | 1.08 |
| 102 | Bangarpet | Kasaba | Doodurukarapanahalli | 203-1 | 0.26 | | 0.26 |
| 103 | Bangarpet | Kasaba | Doodurukarapanahalli | 283-2 | 0.2 | | 0.2 |
| 104 | Bangarpet | Kasaba | Doodurukarapanahalli | 283-3 | 0.1 | | 0.1 |
| 105 | Bangarpet | Kasaba | Doodurukarapanahalli | 3 | 0.1 | | 0.1 |
| 106 | Bangarpet | Kasaba | Doodurukarapanahalli | 312 | 2.26 | | 2.26 |
| 107 | Bangarpet | Kasaba | Doodurukarapanahalli | 54 | 2.17 | | 2.17 |
| 108 | KGF | Kasaba | Swarnakuppam | 58 | 33.34 | | 33.34 |
| 109 | KGF | Robertsonpet | Oorgaum | 151 | 0.13 | 7.32 | -7.19 |
| 110 | KGF | Robertsonpet | Oorgaum | 152 | 0.21 | 0.2 | 0.01 |
| 111 | KGF | Robertsonpet | Oorgaum | 153 | 4.18 | 4.09 | 0.09 |
| 112 | KGF | Robertsonpet | Oorgaum | 154 | 2.37 | 2.37 | 0 |
| 113 | KGF | Robertsonpet | Oorgaum | 155 | 6.14 | 6 | 0.14 |

| | | | | | | | | |
|---|---|---|---|---|---|---|---|---|
| 114 | KGF | Robertsonpet | Oorgaum | 253 | 7 | | 7 | |
| 115 | KGF | Kysamballi | Bytarayanahalli | 16 | 23.23 | | 23.23 | |
| 116 | KGF | Kysamballi | Doddakallahalli | 89 | 1.16 | 1.16 | 0 | |
| 117 | KGF | Kysamballi | Doddakallahalli | 88 | 97.26 | | 97.26 | |
| 118 | KGF | Bangaradagani | Bangaradagani village | 1 and 2 | 7171.24 | 7171.24 | 0 | |
| | | | | **TOTAL** | **12335.51** | **10307.27** | **2028.24** | |

ಅನುಬಂಧ 2

**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:-** **ಕೋಲಾರ ಜಿಲ್ಲೆ, ಕೆ.ಜಿ.ಎಫ್ ತಾಲ್ಲೂಕಿನ ಬಂಗಾರದ ಗಣಿ ಗ್ರಾಮದ ಸ.ನಂ 2 ರಲ್ಲಿ 668-20 ಎಕರೆ/ಗುಂಟೆ ಮತ್ತು ಸ.ನಂ 03 ರಲ್ಲಿ 294-00 ಎಕರೆ/ಗುಂಟೆ ಒಟ್ಟು 962-20 ಎಕರೆ/ಗುಂಟೆ ಜಮೀನನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಬೆಂಗಳೂರು ಇವರಿಗೆ ಮಂಜೂರು ಮಾಡುವ ಬಗ್ಗೆ.**

ಓದಲಾಗಿದೆ: 1. **ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆರವರ ಅರೆ ಸರ್ಕಾರಿ ಪತ್ರ ಸಂಖ್ಯೆಸಿಐ 61 ಎಸ್‌ಪಿಕ್ಯೂ(E) 2019, ದಿನಾಂಕ: 04.03.2021.**

2. **ಜಿಲ್ಲಾಧಿಕಾರಿ, ಕೋಲಾರ ಜಿಲ್ಲೆರವರ ಪತ್ರದ ಸಂಖ್ಯೆ;ಎಲ್‌ಎನ್‌ಡಿ/ ಸಿಆರ್/93/20-21, ದಿನಾಂಕ:20.11.2023.**

*****

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರ,ಸಂ.(1)ರಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆರವರ ದಿನಾಂಕ:04.03.2021 ರ ಪತ್ರದಲ್ಲಿ, ದಿನಾಂಕ: 20.02.2021 ರಂದು ನಡೆದ ಸಭೆಯ ನಡವಳಿಯಂತೆ ಬಿ.ಇ.ಎಂ.ಎಲ್ ಸಂಸ್ಥೆಯು ಬಳಕೆ ಮಾಡದೇ ಇರುವ 971-33 ಎಕರೆ/ಗುಂಟೆ ಜಮೀನನ್ನು ಕೈಗಾರಿಕಾ ಪ್ರದೇಶವನ್ನಾಗಿ ಅಭಿವೃದ್ಧಿಪಡಿಸುವ ಸಲುವಾಗಿ ಕೆ.ಐ.ಎ.ಡಿ.ಬಿ ಗೆ ಉಚಿತವಾಗಿ ಮಂಜೂರು ಮಾಡುವಂತೆ ಕೋರಿರುತ್ತಾರೆ.

ಮೇಲೆ ಓದಲಾದ ಕ್ರ,ಸಂ.(2) ಕೋಲಾರ ಜಿಲ್ಲೆ, ಕೆ.ಜಿ.ಎಫ್ ತಾಲ್ಲೂಕು, ರಾಬರ್ಟ್ ಸನ್‌ಪೇಟೆ ಹೋಬಳಿ, ಕೆ.ಜಿ.ಎಫ್ ಪ್ರದೇಶದಲ್ಲಿ 1964-65 ನೇ ಸಾಲಿನಲ್ಲಿ ರಾಜ್ಯ ಸರ್ಕಾರವು ಬಿ.ಇ.ಎಂ.ಎಲ್ ಕಾರ್ಖಾನೆ ಸ್ಥಾಪಿಸಲು ಒಟ್ಟು 1846-00 ಎಕರೆ ಜಮೀನನ್ನು ಉಚಿತವಾಗಿ ನೀಡಿರುತ್ತದೆ; ಈ ಪೈಕಿ ಬಿ.ಇ.ಎಂ.ಎಲ್ ಸಂಸ್ಥೆಯು ತನ್ನ ಉದ್ದೇಶಿತ ಚಟುವಟಿಕೆಗಳಿಗೆ ಅವಶ್ಯಕವಾದ ಜಮೀನನ್ನು ಉಪಯೋಗಿಸಿಕೊಂಡು, ಸಂಸ್ಥೆಗೆ ಅವಶ್ಯಕತೆಯಿಲ್ಲದ 967-20 ಎಕರೆ/ಗುಂಟೆ ಜಮೀನನ್ನು ಹೆಚ್ಚುವರಿ ಜಮೀನೆಂದು ನಿರ್ಧರಿಸಿ, ಸರ್ಕಾರದ ಆದೇಶ ಸಂಖ್ಯೆ ಆರ್‌ಡಿ 22 ಎಲ್‌ಜಿಕೆ 2019(ಇ) ದಿನಾಂಕ:20.07.2020 ರನ್ವಯ ಸರ್ಕಾರದ ವಶಕ್ಕೆ ಪಡೆಯಲು ಹಾಗೂ ಹಿಂಪಡೆಯಲಾದ ಜಮೀನಿನ ಸರ್ವೆ ನಡೆಸಿ ಹದ್ದುಬಸ್ತು ಗುರ್ತಿಸಿ ಸಂರಕ್ಷಿಸಲು ಸರ್ಕಾರದ ಅನುಮೋದನೆ ನೀಡಲಾಗಿರುತ್ತದೆ.

ಅದರಂತೆ, ಬಿ.ಇ.ಎಂ.ಎಲ್ ಸಂಸ್ಥೆಯು ತನ್ನ ಉದ್ದೇಶಿತ ಚಟುವಟಿಕೆಗಳಿಗೆ ಜಮೀನನ್ನು ಉಪಯೋಗಿಸಿಕೊಂಡು ಸಂಸ್ಥೆಗೆ ಅವಶ್ಯಕತೆಯಿಲ್ಲದ 967-20 ಎಕರೆ/ಗುಂಟೆ ಜಮೀನನ್ನು ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969 ರ ನಿಯಮ 25(2) ರಂತೆ ಎಲ್ಲಾ ಋಣಭಾರಗಳಿಂದ ಮುಕ್ತಗೊಳಿಸಿ ಕಂದಾಯ ಇಲಾಖೆಯು ವಶಕ್ಕೆ ಪಡೆದು ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮ ನಿಯಮಿತ ರವರಿಗೆ ಹಸ್ತಾಂತರ ಮಾಡಲು ಸರ್ಕಾರವು ಆದೇಶಿಸಿದೆ. ಅದರಂತೆ ಪ್ರಸ್ತಾಪಿತ ಜಮೀನು ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮ ನಿಯಮಿತದ ಅಧೀನದಲ್ಲಿರುತ್ತದೆ

ಕೆ.ಜಿ.ಎಫ್ ತಾಲ್ಲೂಕು ಬಂಗಾರದ ಗಣಿ ಗ್ರಾಮದ ಸ.ನಂ. 02 ರಲ್ಲಿನ ಜಮೀನನ್ನು ಜಿಲ್ಲಾಧಿಕಾರಿಯವರು ವಿವಿಧ ಉದ್ದೇಶಗಳಿಗಾಗಿ ಈ ಕೆಳಕಂಡಂತೆ ಕಾಯ್ದಿರಿಸಿರುತ್ತಾರೆ:-

1. ಅಧಿಕೃತ ಜ್ಞಾಪನ ಸಂಖ್ಯೆ ಎಲ್ ಎನ್ ಡಿ ಸಿಆರ್ 155/2021-22 ದಿನಾಂಕ 01/10/2021 ರಂತೆ 5-00 ಎಕರೆ ಜಮೀನನ್ನು ಪ್ರಾದೇಶಿಕ ಸಾರಿಗೆ ಕಚೇರಿ ಕಟ್ಟಡ ನಿರ್ಮಾಣಕ್ಕಾಗಿ ಸಾರಿಗೆ ಇಲಾಖೆಯ ಹೆಸರಿನಲ್ಲಿರುತ್ತದೆ.
2. ಆದೇಶ ಸಂಖ್ಯೆ:ಎಲ್.ಎನ್.ಡಿ/ಸಿಆರ್/72/2022-23 ದಿನಾಂಕ:14.10.2022 ರಂತೆ 5-00 ಎಕರೆ ಜಮೀನನ್ನು ಡಾ|| ಬಿ.ಆರ್. ಅಂಬೇಡ್ಕರ್ ಸ್ಮಾರಕ ಮ್ಯೂಸಿಯಂ/ಕಾನ್ಫರೆನ್ಸ್ ಹಾಲ್/ವಸ್ತು ಸಂಗ್ರಹಾಲಯ/ಸಂಶೋಧನಾ ಕೇಂದ್ರಕ್ಕಾಗಿ ಜಂಟಿ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಕೋಲಾರರವರ ಹೆಸರಿನಲ್ಲಿರುತ್ತದೆ.
3. ಆದೇಶ ಸಂಖ್ಯೆ:ಎಲ್.ಎನ್.ಡಿ/ಸಿಆರ್/76/2022-23 ದಿನಾಂಕ:14.11.2022 ರಂತೆ 9-00 ಎಕರೆ ಜಮೀನನ್ನು ಕೆ.ಜಿ.ಎಫ್ ಪಟ್ಟಣದ ಬೀದಿ ಬದಿ ವಾಸವಾಗಿರುವ ವಸತಿ ಹೀನ ದಿನಗೂಲಿ ಕಾರ್ಮಿಕರಿಗೆ ಪುನರ್ವಸತಿ ನಿವೇಶನಗಳಿಗಾಗಿ ಆಯುಕ್ತರು ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಬೆಂಗಳೂರು ರವರ ಹೆಸರಿನಲ್ಲಿರುತ್ತದೆ.

ಪ್ರಾದೇಶಿಕ ಸಾರಿಗೆ ಇಲಾಖೆಗೆ ಕಾಯ್ದಿರಿಸಿರುವ ಜಮೀನಿನಲ್ಲಿ ಕಟ್ಟಡ ನಿರ್ಮಾಣ ಕಾಮಗಾರಿಯು ಪ್ರಗತಿಯಲ್ಲಿರುವುದರಿಂದ ಮಂಜೂರಾತಿಯನ್ನು ರದ್ದುಪಡಿಸಿದಲ್ಲಿ ಸರ್ಕಾರಕ್ಕೆ ಆರ್ಥಿಕ ನಷ್ಟವುಂಟಾಗುವುದರಿಂದ ಸದರಿ ಮಂಜೂರಾತಿಯನ್ನು ಸ್ಥಿರೀಕರಿಸಲು ಮತ್ತು ಸಮಾಜ ಕಲ್ಯಾಣ ಇಲಾಖೆಗೆ ಮತ್ತು ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಗಳಿಗೆ ಜಮೀನು ಕಾಯ್ದಿರಿಸಿರುವುದನ್ನು ರದ್ದುಪಡಿಸಿ ಸ.ನಂ.2 ರಲ್ಲಿ ಲಭ್ಯವಾಗುವ 668-20 ಎಕರೆ/ಗುಂಟೆ ಮತ್ತು ಸ.ನಂ.03 ರಲ್ಲಿನ 294-00 ಎಕರೆ/ಗುಂಟೆ ಸೇರಿ ಒಟ್ಟು 962-20 ಎಕರೆ/ಗುಂಟೆ ಜಮೀನನ್ನು ಕೆ.ಐ.ಎ.ಡಿ.ಬಿ. ಗೆ ಮಂಜೂರು ಮಾಡುವ ವಿಚಾರದಲ್ಲಿ ಸರ್ಕಾರದ ಹಂತದಲ್ಲಿ ಮುಂದಿನ ಕ್ರಮವಹಿಸಬಹುದಾಗಿರುತ್ತದೆ ಎಂದು ಜಿಲ್ಲಾಧಿಕಾರಿ, ಕೋಲಾರ ಜಿಲ್ಲೆ ರವರು ವರದಿ ಮಾಡಿರುತ್ತಾರೆ.

ಅದರಂತೆ ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

<u>ಸರ್ಕಾರದ ಆದೇಶ ಸಂಖ್ಯೆ: ಆರ್.ಡಿ 22 ಎಲ್‌ಜಿಕೆ 2019(ಇ),</u>
<u>ಬೆಂಗಳೂರು ದಿನಾಂಕ:26.12.2023</u>

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿಕೋಲಾರ ಜಿಲ್ಲೆಯಲ್ಲಿ ಬಿ.ಇ.ಎಂ.ಎಲ್ ಸಂಸ್ಥೆಗೆ ಸೇರಿದ ವಿಸ್ತೀರ್ಣ 967-20 ಎಕರೆ/ಗುಂಟೆ ಸರ್ಕಾರಿ ಜಮೀನನ್ನು ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮ ನಿಯಮಿತ ರವರಿಗೆ ಹಸ್ತಾಂತರ ಮಾಡಿ ಹೊರಡಿಸಿದ್ದ ಸರ್ಕಾರದ ಆದೇಶ ಸಂಖ್ಯೆ ಆರ್‌ಡಿ 22 ಎಲ್‌ಜಿಕೆ 2019 ದಿನಾಂಕ;01.12.2022 ಹಿಂಪಡೆದು ಈ ಕೆಳಕಂಡಂತೆ ಆದೇಶಿಸಿದೆ.

1. ಕೋಲಾರ ಜಿಲ್ಲೆ, ಕೆ,ಜಿ,ಎಫ್ ತಾಲ್ಲೂಕಿನ ಬಂಗಾರದ ಗಣಿ ಗ್ರಾಮದ ಸ.ನಂ 2 ರಲ್ಲಿ ಆದೇಶ ಸಂಖ್ಯೆ:ಎಲ್.ಎನ್.ಡಿ/ಸಿಆರ್/72/2022-23 ದಿನಾಂಕ:14.10.2022 ರನ್ವಯ5-00 ಎಕರೆ ಜಮೀನನ್ನುಡಾ:ಬಿ.ಆರ್.ಅಂಬೇಡ್ಕರ್ ಸ್ಮಾರಕ, ಮ್ಯೂಸಿಯಂ, ವಸ್ತುಸಂಗ್ರಹಾಲಯ, ಸಂಶೋಧನಾ ಕೇಂದ್ರ ಸ್ಥಾಪನೆಗಾಗಿ ಸಮಾಜ ಕಲ್ಯಾಣ ಇಲಾಖೆಯ ಹೆಸರಿನಲ್ಲಿ ಮತ್ತು ಆದೇಶ ಸಂಖ್ಯೆ:ಎಲ್.ಎನ್.ಡಿ/ಸಿಆರ್/76/2022-23 ದಿನಾಂಕ:14.11.2022 ರನ್ವಯ 9-00 ಎಕರೆ ಜಮೀನನ್ನು ಕೆ.ಜಿ.ಎಫ್ ಪಟ್ಟಣದ ಬೀದಿ ಬದಿ ವಾಸವಾಗಿರುವ ವಸತಿ ಹೀನ ದಿನಗೂಲಿ ಕಾರ್ಮಿಕರಿಗೆ ಪುನರ್ವಸತಿ ಕಲ್ಪಿಸುವುದಕ್ಕಾಗಿ ಆಯುಕ್ತರು ಕರ್ನಾಟಕ ಕೊಳಗೇರಿ ಅಭಿವೃದ್ಧಿ

ಮಂಡಳಿ ಬೆಂಗಳೂರು ರವರ ಹೆಸರಿನಲ್ಲಿ ಜಿಲ್ಲಾಧಿಕಾರಿ, ಕೋಲಾರ ಜಿಲ್ಲೆ ಇವರು ಕಾಯ್ದಿರಿಸಿರುವುದನ್ನು ರದ್ದುಪಡಿಸಿದೆ.

2. ಕೋಲಾರ ಜಿಲ್ಲೆ, ಕೆ.ಜಿ.ಎಫ್ ತಾಲ್ಲೂಕಿನ ಬಂಗಾರದ ಗಣಿ ಗ್ರಾಮದ ಸ.ನಂ.02 ರಲ್ಲಿ ಅಧಿಕೃತ ಜ್ಞಾಪನ ಸಂಖ್ಯೆ ಎಲ್.ಎನ್.ಡಿ/ಸಿಆರ್. 155/2021-22 ದಿನಾಂಕ 01.10.2021 ರನ್ವಯ 5-00 ಎಕರೆ ಜಮೀನನ್ನು ಪ್ರಾದೇಶಿಕ ಸಾರಿಗೆ ಇಲಾಖೆಗೆ ಜಿಲ್ಲಾಧಿಕಾರಿ, ಕೋಲಾರ ಜಿಲ್ಲೆ ಇವರು ಕಾಯ್ದಿರಿಸಿರುವುದನ್ನು ಸ್ಥಿರೀಕರಿಸಿದೆ.

3. ಕೋಲಾರ ಜಿಲ್ಲೆ, ಕೆ.ಜಿ.ಎಫ್ ತಾಲ್ಲೂಕಿನ ಬಂಗಾರದ ಗಣಿ ಗ್ರಾಮದ ಸ.ನಂ.02 ರಲ್ಲಿ ಲಭ್ಯವಾಗುವ 668-20 ಎಕರೆ/ಗುಂಟೆ ಜಮೀನನ್ನು ಕರ್ನಾಟಕ ಭೂ ಮಂಜೂರಾತಿ ನಿಯಮಗಳು, 1969 ರ ನಿಯಮ 20(1)(ಸಿ) ರಡಿ ಪ್ರಸ್ತಾಪಿತ ಜಮೀನಿನ ಪ್ರಚಲಿತ ಕೃಷಿಯೇತರ ಮಾರುಕಟ್ಟೆ ಮೌಲ್ಯದ ಶೇಕಡ 50 ರಷ್ಟು ಮತ್ತು ಇನ್ನಿತರ ಶಾಸನಬದ್ಧ ಶುಲ್ಕಗಳನ್ನು ವಿಧಿಸಿ ಕರ್ನಾಟಕ ಭೂಮಂಜೂರಾತಿ ನಿಯಮಗಳನ್ವಯ ವಿಧಿಸಬಹುದಾದ ಷರತ್ತುಗಳೊಂದಿಗೆ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಬೆಂಗಳೂರು ಇವರಿಗೆ ಮಂಜೂರು ಮಾಡಿ ಆದೇಶಿಸಿದೆ.

4. ಮುಂದುವರೆದು, ಕೋಲಾರ ಜಿಲ್ಲೆ, ಕೆ.ಜಿ.ಎಫ್ ತಾಲ್ಲೂಕಿನ ಬಂಗಾರದ ಗಣಿ ಗ್ರಾಮದ ಸ.ನಂ.03 ರಲ್ಲಿನ 294-00 ಎಕರೆ ಜಮೀನನ್ನು ನಗರಾಭಿವೃದ್ಧಿ ಇಲಾಖೆಯು ಅಭಿವೃದ್ಧಿಪಡಿಸುವ integrated township ಗಾಗಿ ಮೀಸಲಿರಿಸಿ ಆದೇಶಿಸಿದೆ.

**ಷರತ್ತುಗಳು**

1. ಮಂಜೂರಾದ ಜಮೀನನ್ನು ಯಾವ ಉದ್ದೇಶಕ್ಕೆ ಮಂಜೂರು ಮಾಡಲಾಗಿದೆಯೋ ಅದೇ ಉದ್ದೇಶಕ್ಕೆ ಎರಡು ವರ್ಷಗಳ ಅವಧಿಯೊಳಗೆ ಉಪಯೋಗಿಸತಕ್ಕದ್ದು ಹಾಗೂ ಸಂಸ್ಥೆಗೆ ಅವಶ್ಯವಿಲ್ಲವೆಂದು ಕಂಡು ಬಂದಲ್ಲಿ ಕಂದಾಯ ಇಲಾಖೆಗೆ ಹಿಂದಿರುಗಿಸತಕ್ಕದ್ದು;
2. ಮಂಜೂರಾದ ಭೂಮಿಯನ್ನು ವಿನಾಶಕಾರಿಯಾದ ಅಥವಾ ಖಾಯಂ ಆಗಿ ಹಾನಿಕಾರಕವಾಗುವ ರೀತಿಯಲ್ಲಿ ಬಳಸತಕ್ಕದ್ದಲ್ಲ ಹಾಗೂ ಯಾವುದೇ ರೀತಿಯ ಅತಿಕ್ರಮಣವಾಗದಂತೆ ಕ್ರಮವಹಿಸತಕ್ಕದ್ದು;
3. ಮಂಜೂರಾದ ಜಮೀನನ್ನು ಕಂದಾಯ ಇಲಾಖೆಯ ಅನುಮತಿ ಇಲ್ಲದೆ ಮಾರಾಟ ಮಾಡುವುದಾಗಲೀ, ಗುತ್ತಿಗೆ/ಉಪಗುತ್ತಿಗೆ ನೀಡುವುದಾಗಲೀ, ಅಡಮಾನ, ವರ್ಗಾವಣೆ, ದಾನ, ಇತರ ಯಾವುದೇ ರೀತಿಯ ಪರಭಾರೆಯನ್ನು ಮಾಡಬಾರದು;
4. ಮಂಜೂರಾದ ಜಮೀನಿನಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಪ್ರಾರಂಭಿಸುವ ಪೂರ್ವದಲ್ಲಿ ಶಾಸನಬದ್ಧವಾಗಿ ಪಡೆಯಬೇಕಾದ ಪರವಾನಗಿಗಳನ್ನು ಸಂಬಂಧಿತ ಪ್ರಾಧಿಕಾರಗಳಿಂದ ಪಡೆಯತಕ್ಕದ್ದು ಹಾಗೂ ನಿಯಮಾನುಸಾರ ಪಾವತಿಸಬೇಕಾದ ಎಲ್ಲಾ ರೀತಿಯ ಶುಲ್ಕಗಳನ್ನು ಕಡ್ಡಾಯವಾಗಿ ಪಾವತಿಸತಕ್ಕದ್ದು.;
5. ಮಂಜೂರಾದ ಜಮೀನು, 1969 ರ ಕರ್ನಾಟಕ ಭೂ ಮಂಜೂರಾತಿ ನಿಯಮಗಳಿಗೆ ಬದ್ಧವಾಗಿರತಕ್ಕದ್ದು ಹಾಗೂ ಜಿಲ್ಲಾಧಿಕಾರಿಗಳು ಮಂಜೂರಾದ ಜಮೀನಿನ ವಾಸ್ತವ ಪರಿಸ್ಥಿತಿಗಳನ್ನು ಗಮನದಲ್ಲಿರಿಸಿಕೊಂಡು ಪೂರಕವಾದ ಷರತ್ತುಗಳನ್ನು ವಿಧಿಸಬಹುದಾಗಿದೆ;

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಸಿ.ಬಲರಾಮ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಭೂಮಂಜೂರಾತಿ-1)

20/12